ಹೇಳ್ತಿದ್ದೀರಿ. ಈ ವಠಾರದಲ್ಲಿ ಅದೆಷ್ಟು ಗಣಪತಿ ಕೂರಿಸ್ತಿದ್ದೀರಾ? ಅದೆಷ್ಟು ಮಂದಿ ಹೀಗೆಯೇ ಬಂದು ಸತಾಯಿಸ್ತೀರಾ? ಹೊಸಬರು, ಬೆಪ್ಪುತಕ್ಕಡಿಗಳು ಅಂತ ತಿಳ್ಕಂಡ್ರಾ? ಪಕ್ಕದ ಮನೆಯವರನ್ನೆಲ್ಲ ವಿವರ ಕೇಳಿ ಯಾರಿಗಾದ್ರೂ ಒಂದು ತಂಡದವರಿಗೆ ಕೈಲಾದಷ್ಟು ಕೊಡ್ತೀನಿ ಅಷ್ಟೇ... ನಾವು ಮನೇಲಿ ನಮ್ಮದೇ ಗಣೇಶ ಬೇರೆ ಕೂರಿಸ್ತೀವಿ... ಮಕ್ಕಳು ಮೊಮ್ಮಕ್ಕಳು ಬರ್ತಾರೆ... ನಮಗೆ ನಮ್ಮದೇ ಹಬ್ಬ ಉಂಟು, ಖರ್ಚುಂಟು. ಯಾವ ಸಾರ್ವಜನಿಕ ಗಣೇಶನೂ ಬೇಕಾಗಿಲ್ಲ ನಮಗೆ...' ದೊಡ್ಡ ಸ್ವರದಲ್ಲಿ ಗುಡುಗಿದರು.

ಬಂದವರೆಲ್ಲ ಮುಖ ಮುಖ ನೋಡಿಕೊಂಡರು. ಇನ್ನೊಬ್ಬ ತಿಳಿಯ ಹೇಳುವ ಶಾಂತ ಸ್ವರದಲ್ಲಿ 'ಸರ್... ಇದು ನಮ್ಮ ಏರಿಯಾ... ನೀವು ಬೇರೆ ಯಾರಿಗೂ ಕೊಡುವ ಅಗತ್ಯ ಇಲ್ಲ. ಇದೇ ರಸ್ತೆಯ ಕೊನೆಯಲ್ಲಿ ನಾವು ಗಣೇಶ ಇಡಲು ಆರಂಭಿಸಿ ಎಂಟು ವರ್ಷಗಳಾಯಿತು. ಈ ಲೇ ಔಟಿನ ಎಲ್ಲ ಮನೆಗಳ ಒಗ್ಗಟ್ಟಿನ ಸಂಕೇತದ ಒಂದೇ ಒಂದು ಕಾರ್ಯಕ್ರಮ. ಒಬ್ಬರಿಗೊಬ್ಬರು ನೆರವಾಗುತ್ತ ಈ ಲೇ ಔಟಿನಲ್ಲಿ ನಾವೆಲ್ಲ ಅನ್ಯೋನ್ಯವಾಗಿದ್ದೇವೆ ಎನ್ನುವುದರ ಸಾಕ್ಷಿ ಈ ಕಾರ್ಯಕ್ರಮ. ಇಲ್ಲಿ ಬಿಟ್ಟು ನಾವು ಹೊರಗೆಲ್ಲೂ ಕಲೆಕ್ಷನ್ನಿಗೆ ಹೋಗೋದಿಲ್ಲ. ಅವರು ಹೇಗೆ ಇಲ್ಲಿ ಬಂದ್ರು? ಇಷ್ಟೇ ಮಾತು ನಮ್ಮ ಬಾಸ್ ಕಿವಿಗೆ ಬಿದ್ರೆ ಗರಂ ಆಗ್ತಾರೆ... ಎಮ್ಮೆಲ್ಲೆ ಎದುರು ಈ ಏರಿಯಾಕ್ಕೆ ಬರೋಲ್ಲ ಅಂತ ಹಿಂದೆ ಸ್ವತಃ ಬಾಕೋರ್ಲು ಮಂಜನೇ ಒಪ್ಕೊಂಡಿದ್ದ. ನಮ್ಮದೇ ಗಣಪತಿ ಇರುವಾಗ ನಿವ್ಯಾಕೆ ಬೇರೆಯವರಿಗೆ ಹಣ ಕೊಡಬೇಕು? ಇನ್ನೊಮ್ಮೆ ಅವರು ಬಂದಾಗ ರೋಡಿನ ಆಚೀಚೆಯ ಗಣೇಶ ಎಲ್ಲ ನಮಗೆ ಅಗತ್ಯ ಇಲ್ಲ ಅನ್ನಿ' ಎಂದ.



'ಒಗ್ಗಟ್ಟಾ? ಯಾವ ಒಗ್ಗಟ್ಟು? ನನ್ನ ಹೆಂಡತಿಯ ಸರವನ್ನು ಸರಗಳ್ಳ ಕಿತ್ಕೊಂಡೋದ. ಆಗ ಯಾರು ಬಂದಿರಿ? ಈಗ ಎರಡು ದಿನಗಳಲ್ಲಿ ಹೀಗೆ ಬೆನ್ನು ಬೆನ್ನಿಗೆ ಚಂದಾ ವಸೂಲಿಗೆ ಮಾತ್ರ ಬಂದದ್ದು. ಅದರ ಮೇಲೆ ಅಷ್ಟುಕೊಡಿ ಇಷ್ಟು ಕೊಡಿ ಅಂತ ಡಿಮಾಂಡು ಬೇರೆ... ನಾನು ಯಾರಿಗೂ ಕೊಡೋಲ್ಲ... ನಮ್ಮ ಮನೇಲೇ ಗಣೇಶ ಪೂಜೆ ಮಾಡಿಕೊಳ್ಳುತ್ತೇವೆ. ನೀವೇನು ಮಾಡ್ತೀರೋ ಮಾಡ್ಕೊಳ್ಳಿ' ಎಂದು ಬಾಗಿಲು ಹಾಕಿದ್ದರು ರಾಯರು.

'ಅವರು ಹೊಸಬರು ಕಣೋ.. ಇದೆಲ್ಲ ಗೊತ್ತಿಲ್ಲ ಅವರಿಗೆ... ಬಾಸಿಗೆ ಹೇಳೋಣ ನಡಿ'